# ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ

## S.C No.32/2020

ಚಾಸಾ:04/ಪ್ರಾಸಾ:02

ದಿನಾಂಕ **10.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಮಹದೇವಮ್ಮ |
| ತಂದೆ / **ಗಂಡನ** ಹೆಸರು | : | ಶ್ರೀ ಜಡೇಗೌಡ |
| ವಯಸ್ಸು | : | 45 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಿಳಾಸ | : | ಬಂಗ್ಲೆಪ್ಪೋಡು, ಬಿಳಿಗಿರಿರಂಗನಬೆಟ್ಟ |

In Camera Evidence recorded

**ಮುಖ್ಯ ವಿಚಾರಣೆ – ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಮೃತ ಬೇದಮ್ಮ ನನಗೆ ಪರಿಚಯವಿದ್ದರು. ಅವರು ಅಂದಾಜು 5–6 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನಾನು ಮೃತ ಬೇದಮ್ಮ ರವರ ಶವಪಂಚನಾಮೆ ಕಾಲದಲ್ಲಿ ಹಾಜರಿರಲಿಲ್ಲ. ಪೊಲೀಸರು ಹೇಳಿದ ಕಾರಣ ಒಂದು ದಾಖಲೆಗೆ ರುಜು ಮಾಡಿರುತ್ತೇನೆ. ಸಾಕ್ಷಿ ಶವಪಂಚನಾಮೆ ದಾಖಲೆಯಲ್ಲಿ ತಮ್ಮ ರುಜುವನ್ನು ಗುರುತಿಸಿರುತ್ತಾರೆ. ಸದರಿ ಮಹಜರ್ ಅನ್ನು ನಿಪಿಃ 8 ಎಂದು ಗುರುತಿಸಲಾಯಿತು. ನಿಪಿಃ 8 ರಲ್ಲಿ ಸಾಕ್ಷಿಯ ರುಜುವನ್ನು ನಿಪಿಃ 8(ಎ) ಎಂದು ಗುರುತಿಸಲಾಯಿತು. ಬೇದಮ್ಮ ಮೃತಪಡಲು ಕಾರಣವೇನು ಎಂದು ನನಗೆ ತಿಳಿದಿಲ್ಲ. ನಾನು ಮೃತ ಬೇದಮ್ಮ ರವರ ಶವವನ್ನು ನೋಡಿರುವುದಿಲ್ಲ.ಶವದ ಮೈ ಮೇಲೆ ಯಾವ ಬಟ್ಟೆಗಳಿದ್ದವು, ಗಾಯಗಳಿದ್ದವು ಎಂದು ನಾನು ನೋಡಿಲ್ಲ.

(ಈ ಸಮಯದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮನವಿ ಮಾಡಿರುತ್ತಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

2. ದಿಃ 29.05.2020ರಂದು ಯಳಂದೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತನಿಖಾಧಿಕಾರಿಯು ನನ್ನ ಹಾಗೂ ಸಾಕ್ಷಿದಾರರಾದ ಚಾಸಾಃ5 ಮತ್ತು 6 ರವರ ಸಮಕ್ಷಮ ಮಧ್ಯಾಹ್ನ 1.45 ರಿಂದ 4.15 ಗಂಟೆಯವರೆಗೆ ಶವಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೃತ ಬೇದಮ್ಮ ರವರ ಶವವನ್ನು ನೋಡಿದ್ದು, ಕತ್ತಿನ ಬಳಿ ಸುಮಾರು 21 cm ಲಿಗೇಚರ್ ಮಾರ್ಕ್ ಕಂಡು ಬಂದಿತ್ತು; ಅವರ ಎರಡೂ ಕಿವಿಗಳಲ್ಲಿ ಹಾಗೂ ಬಾಯಲ್ಲಿ ರಕ್ತ ಹೊರಬಂದಿತ್ತು; 'ಬೆನ್ನಿನ ಚರ್ಮ ಹೆಡೆದಂತೆ ಕಂಡುಬಂದಿತ್ತು; ಎಡತೊಡೆಯಲ್ಲಿ ಅಲ್ಲಲ್ಲಿ ತರಚಿದ ಸಣ್ಣ ಸಣ್ಣ ಗಾಯಗಳು ಕಂಡು ಬಂದಿತ್ತು; ಎರಡು ಕಾಲಿನ ಮಂಡಿಗಳ ಬಳಿ ತರಚಿದ ಗಾಯ ಕಂಡು ಬಂದಿತ್ತು ಎಂದು ಸೂಚಿಸುವುದು ಸರಿಯಲ್ಲ. ಬೇದಮ್ಮ ರವರ ಶವದ ಮೇಲೆ ಆಕಾಶನೀಲಿ ಬಣ್ಣದ ಹೂವುಗಳುಳ್ಳ ಮಾಸಲು ಸೀರೆ, ಹಸಿರು ಬಣ್ಣದ ರವಿಕೆ, ನೀಲಿ ಬಣ್ಣದ ಲಂಗಾ ಹಾಗೂ ನೀಲಿ ಬಣ್ಣದ ಟೈಟ್ಸ್ ಇದ್ದವು ಎಂದರೆ ಸರಿಯಲ್ಲ.ಸಾಕ್ಷಿ ನಿಪಿಃ 3, 4, 5, 6, 7 ಛಾಯಾಚಿತ್ರಗಳನ್ನು ನೋಡಿ ಅದರಲ್ಲಿ ಬೇದಮ್ಮ ರವರ ಶವ ಕಾಣುತ್ತಿದೆ ಎಂದು ನುಡಿಯುತ್ತಾರೆ. ನಿಪಿಃ 8 ಶವಪಂಚನಾಮೆ ಕಾಲದಲ್ಲಿ ಹಾಜರಿದ್ದು ರುಜು ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಬೇದಮ್ಮ ರವರ ಅತ್ತೆ ಹಾಗೂ ಗಂಡ ಸೇರಿಕೊಂಡು ಬೇದಮ್ಮನ ಕಪಾಲಕ್ಕೆ ಹೊಡೆದು ವೈರ್ ನಿಂದ ನೇಣು ಹಾಕಿ ಸಾಯಿಸಿರುತ್ತಾರೆ ಎಂದು ನನಗೆ ತಿಳಿದುಬಂದಿತ್ತು ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಯ ಪರವಾಗಿಃ ಶ್ರೀ ಎ ಪಿ ಎಂ ವಕೀಲರಿಂದ**

ಆರೋಪಿ ಪರ ವಕೀಲರು ಹಾಜರಿದ್ದು ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಲಾಗಿ ಕೇಳಿ ಸರಿಯಿದೆ ಎಂದು ಒಪ್ಪಿರುತ್ತಾರೆ.

**(ಎಸ್.ಜೆ. ಕೃಷ್ಣ)**
ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ.